# ರಾಮಕೃಷ್ಣ ಮಹಾಸಂಘದ




**ಸ್ವಾ**ಮಿ ವಿವೇಕಾನಂದರು ಅಮೆರಿಕಾದಿಂದ ಭಾರತಕ್ಕೆ ಹಿಂತಿರುಗಿದ ಕೂಡಲೇ ತಡ ಮಾಡದೆ ರಾಮಕೃಷ್ಣ ಸಂಘವನ್ನು ಮೇ ೧, ೧೮೯೭ರಲ್ಲಿ ಸ್ಥಾಪಿಸಿದರು. ಸಂಘಕ್ಕೆ 'ಸ್ವಂತ ಮೋಕ್ಷ' ಮತ್ತು 'ಜಗತ್ತಿನ ಹಿತ' ಎಂಬ ಎರಡು ಧ್ಯೇಯಗಳನ್ನು ವಿಧಿಸಿದರು. ಎರಡನೆಯದು ಮೊದಲನೆಯದಕ್ಕೆ ಪೋಷಕವೂ ಪೂರಕವೂ ಆದುದು. ಮೊದಲನೆಯದು ಇಲ್ಲದಿದ್ದರೆ ಎರಡನೆಯದಕ್ಕೆ ಬೆಲೆಯಿಲ್ಲ. ಸಂಘಸ್ಥಾಪನೆ ಮತ್ತು ಈ ಅವಳಿ ಆದರ್ಶಗಳ ಬೋಧನೆ – ಇವೆರಡೂ ಜಗತ್ತಿಗೆ ಸ್ವಾಮಿ ವಿವೇಕಾನಂದರ ದೊಡ್ಡ ಕೊಡುಗೆಗಳು ಎಂದು ಹೇಳಬಹುದು. ರಾಮಕೃಷ್ಣ ಸಂಘ ಈಗಾಗಲೇ ಒಂದು ಶತಮಾನಕ್ಕೂ ಹಳೆಯದಾಗಿದೆ. ಈ ಸಂಘದ ಪರಿಹಾರ ಕಾರ್ಯಗಳತ್ತ ಗಮನಹರಿಸಿದರೆ ಅದೊಂದು ಸುದೀರ್ಘ ಚರಿತ್ರೆಯಾಗುವುದು. ಏಕೆಂದರೆ ಅದರ ಉಗಮವು ಸಂಘದಷ್ಟೇ ಅಥವಾ ಒಂದು ದೃಷ್ಟಿಯಿಂದ ಅದಕ್ಕಿಂತ ಹಳೆಯದು. ಇವನ್ನೆಲ್ಲ ಕ್ರೋಡೀಕರಿಸುವ ಮಹತ್‌ಕಾರ್ಯ, ಸ್ವಾಮಿ ವಿವೇಕಾನಂದರ ೧೫೦ನೆಯ ಜನ್ಮೋತ್ಸವದ ಅಂಗವಾಗಿ ಈಗಾಗಲೇ ಪ್ರಾರಂಭವಾಗಿದೆ. ಅದು ಓದುಗರ ಕೈ ಸೇರುವುದಕ್ಕೆ ಇನ್ನೂ ಒಂದು ವರ್ಷ ಕಾಲ ಬೇಕಾಗಬಹುದು.

ಡಾ. ಇ. ವಸಂತ ಕುಮಾರ್

**ರಾಮಕೃಷ್ಣ ಮಹಾಸಂಘವು ವಿಕೋಪಗಳಲ್ಲಿ ತಾನು ಮಾಡುತ್ತಿರುವ ಅನುಪಮ ಪರಿಹಾರಕಾರ್ಯಕ್ಕೆ ಹೆಸರುವಾಸಿಯಾಗಿದೆ. ಈ ಪರಿಹಾರ ಕಾರ್ಯದ ದೀರ್ಘ ಇತಿಹಾಸ ಮತ್ತು ವೈಶಿಷ್ಟ್ಯಗಳನ್ನು ಎಳೆಎಳೆಯಾಗಿ ನಮ್ಮ ಮುಂದೆ ಬಿಚ್ಚಿಟ್ಟಿರುವುದನ್ನು ಈ ಲೇಖನದಲ್ಲಿ ಕಾಣುತ್ತೇವೆ. ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಇವರು ಈ ಪತ್ರಿಕೆಗೆ ಹಲವಾರು ಲೇಖನಗಳನ್ನು ಬರೆದುಕೊಟ್ಟಿದ್ದಾರೆ.**

ರಾಮಕೃಷ್ಣಸಂಘ ಉದ್ಘಾಟನೆಯಾದ ಎರಡು ವಾರಗಳಲ್ಲೇ ಮೊಟ್ಟಮೊದಲ ಅಧಿಕೃತ ಪರಿಹಾರಕಾರ್ಯ ಅನಿರೀಕ್ಷಿತವಾಗಿ ಪ್ರಾರಂಭವಾಯಿತು! ಆ ಸಮಯದಲ್ಲಿ ಮಠ ಆಲಂಬಜ಼ಾರ್‌ನಲ್ಲಿ ಇತ್ತು. ಸ್ವಾಮಿ ವಿವೇಕಾನಂದರು ಡಾರ್ಜಿಲಿಂಗ್‌ಗೆ ಹೋಗಿದ್ದರು. ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರೂ ಸ್ವಾಮಿ ವಿವೇಕಾನಂದರ ಗುರುಭಾಯಿಗಳೂ ಆಗಿದ್ದ ಸ್ವಾಮಿ ಅಖಂಡಾನಂದರು ಪರಿವ್ರಾಜಕರಾಗಿ, ನವದ್ವೀಪ, ಮುರ್ಷಿದಾಬಾದ್ ಮುಂತಾದ ಉತ್ತರ ಬಂಗಾಳದ ಸ್ಥಳಗಳನ್ನು ನೋಡಲು ಆಲಂಬಜ಼ಾರ್ ಮಠದಿಂದ ಹೊರಟರು. ಆದರೆ ಆ ಸಮಯದಲ್ಲಿ ನಾಡಿಯಾ ಮತ್ತು ಮುರ್ಷಿದಾಬಾದ್ ಜಿಲ್ಲೆಗಳಲ್ಲಿ ಕ್ಷಾಮ ತಲೆದೋರಿತ್ತು. ಜನರು ದಾರಿದ್ರ್ಯದಿಂದ ನಿಸ್ಸಹಾಯಕರಾಗಿ ಬಳಲುತ್ತಿದ್ದರು. ಇದನ್ನು ಕಂಡ ಸ್ವಾಮಿ ಅಖಂಡಾನಂದರಿಗೆ ಮುಂದೆ ಸಾಗಲು ಮನಸ್ಸಾಗದೆ ಮಹುಲ ಎಂಬ ಗ್ರಾಮದಲ್ಲಿ ನಿಂತು ಕ್ಷಾಮವಿದ್ದ 'ಭಬ್ದ' ಎಂಬ ಗ್ರಾಮದ ಜನರಿಗೆ ನೆರವಾಗಲು ಮನಸ್ಸು ಮಾಡಿದರು. ಆದರೆ ಅವರ ಕೈಯಲ್ಲಿ ಬಿಡಿಗಾಸೂ ಇರಲಿಲ್ಲ. ಬಡವರಿಗೆ, ನೊಂದವರಿಗೆ ಸೇವೆಮಾಡಲು ತಮಗೆ ಅನುವಾಗುವಂತೆ ಶ್ರೀರಾಮಕೃಷ್ಣರಿಗೆ ಕಣ್ಣೀರಿಡುತ್ತ ನಿತ್ಯವೂ ಪ್ರಾರ್ಥಿಸುತ್ತಿದ್ದರು. ಅಲ್ಲಿನ ಜನರ ಸ್ಥಿತಿಯನ್ನು ವಿವರಿಸಿ ಆಲಂಬಜ಼ಾರಿನಲ್ಲಿದ್ದ ಸ್ವಾಮಿ ಪ್ರೇಮಾನಂದರಿಗೆ ಮೂರು ಪತ್ರಗಳನ್ನು ಬರೆದರು. ಈ ವಿಷಯವನ್ನು ತಿಳಿದ, ಮದರಾಸಿನಲ್ಲಿದ್ದ ಸ್ವಾಮಿ ರಾಮಕೃಷ್ಣಾನಂದರು, "ನೀವು, ಕಾಸಿಲ್ಲದೆ ಬರಿಗೈಯಲ್ಲಿರುವ ಸಂನ್ಯಾಸಿಗಳು. ಸಾವಿರಾರು ಜನರಿಗೆ ಆಹಾರ ಒದಗಿಸಲು ಸಾಧ್ಯವೆ? ಮಠಕ್ಕೆ ಹಿಂದಿರುಗಿ" ಎಂದು ಬರೆದರು. ಸ್ವಾಮಿ ಬ್ರಹ್ಮಾನಂದರೂ ಹಾಗೆಯೇ

# ಪರಿಹಾರ ಕಾರ್ಯಗಳು

ಹೇಳಿದರು. ಆದರೆ ಜನರ ಕಷ್ಟಗಳಿಂದ ಮನನೊಂದಿದ್ದ ಸ್ವಾಮಿ ಅಖಂಡಾನಂದರು, ಜನರಿಗೆ ಏನಾದರೂ ಪರಿಹಾರದ ವ್ಯವಸ್ಥೆ ಮಾಡುವವರೆಗೂ ಆ ಸ್ಥಳವನ್ನು ಬಿಟ್ಟು ಕದಲುವುದಿಲ್ಲವೆಂದು ನಿರ್ಧರಿಸಿದರು. ಡಾರ್ಜಿಲಿಂಗ್‌ನಿಂದ ಮಠಕ್ಕೆ ಹಿಂತಿರುಗಿದ ಸ್ವಾಮಿ ವಿವೇಕಾನಂದರು, ಸ್ವಾಮಿ ಅಖಂಡಾನಂದರ ಮೂರು ಪತ್ರಗಳನ್ನು ಓದಿ ಆತಂಕಗೊಂಡು, ಕೂಡಲೆ ೧೫೦ ರೂಪಾಯಿಗಳನ್ನು ಮತ್ತು ಇಬ್ಬರು ಸಂನ್ಯಾಸಿಗಳನ್ನು ಕಳುಹಿಸಿ ಪರಿಹಾರ ಕಾರ್ಯವನ್ನು ತಡವಿಲ್ಲದೆ ಪ್ರಾರಂಭಿಸಬೇಕೆಂಬ ಸಂದೇಶವನ್ನು ರವಾನಿಸಿದರು. ಹೀಗೆ, ಮಹುಲ ಗ್ರಾಮದ ೧೮ ಕ್ಷಾಮಪೀಡಿತ ಸಂಸಾರಗಳಿಗೆ ಅಕ್ಕಿ ವಿತರಿಸುವ ಮೂಲಕ, ರಾಮಕೃಷ್ಣಸಂಘದ ಮೊದಲ ಪರಿಹಾರ ಕಾರ್ಯ ೧೮೯೭ರ ಮೇ ೧೫ರಂದು ಪ್ರಾರಂಭವಾಯಿತು. ಇದೊಂದು ಚಾರಿತ್ರಿಕ ಘಟನೆ. ಇದರೊಂದಿಗೆ ರಾಮಕೃಷ್ಣ ಸಂಘದ ಇತಿಹಾಸದಲ್ಲಿ ಹೊಸ ಅಧ್ಯಾಯ ಪ್ರಾರಂಭವಾದಂತಾಯಿತು.

ಮುರ್ಷಿದಾಬಾದ್ ಕ್ಷಾಮನಿವಾರಣಾಕಾರ್ಯದ ಅನಂತರ ಮಹಾಸಂಘದ ಮುಖ್ಯ ಪರಿಹಾರಕಾರ್ಯ ನಡೆದುದು ೧೮೯೮ರ ಕಲ್ಕತ್ತೆಯ ಪ್ಲೇಗ್ ಪಿಡುಗಿನ ಸಮಯದಲ್ಲಿ. ಆಗ ಜನರು ಭಯಭೀತರಾಗಿ ಕಲ್ಕತ್ತೆಯನ್ನು ಬಿಟ್ಟುಹೋಗುತ್ತಿದ್ದರು. ಪ್ಲೇಗ್ ಸಾಂಕ್ರಾಮಿಕ ಜಾಡ್ಯ. ಆಗಿನ ಕಾಲದಲ್ಲಿ ಅದಕ್ಕೆ ನಿರೋಧಕ ಚುಚ್ಚುಮದ್ದು ಇತ್ತು; ಆದರೆ ಔಷಧವಿರಲಿಲ್ಲ. ಬ್ರಿಟಿಷ್ ಸರ್ಕಾರ ಚುಚ್ಚುಮದ್ದನ್ನು ಕೊಡುವ ವ್ಯವಸ್ಥೆ ಮಾಡಿದ್ದರೂ, ಆಮೂಲಕ ಸರ್ಕಾರ ಜನರನ್ನು ಕೊಲ್ಲುತ್ತಿದೆ ಎಂಬ ವದಂತಿ ಹಬ್ಬಿದುದರ ಪರಿಣಾಮವಾಗಿ, ಜನರು ಕಂಗಾಲಾಗಿ ಮನೆ ಬಿಟ್ಟು ಓಡಿಹೋಗುತ್ತಿದ್ದರು. ಆಗ ರಾಮಕೃಷ್ಣ ಮಠ ಆಲಂಬಜ್ಞಾರಿನಿಂದ ಸ್ಥಳಾಂತರಗೊಂಡು ನೀಲಾಂಬರಬಾಬು ತೋಟದ ಮನೆಯಲ್ಲಿತ್ತು. ಸ್ವಾಮಿ ವಿವೇಕಾನಂದರು ಮಠದ ಸಂನ್ಯಾಸಿಗಳನ್ನು ಸಂಬೋಧಿಸಿ, "ನಾವೆಲ್ಲರೂ ದೇವರ ಹೆಸರಿನಲ್ಲಿ ಇಲ್ಲಿ ಸೇರಿದ್ದೇವೆ. ನಮ್ಮ ಪ್ರಾಣಾಪಾಯವನ್ನು ಲೆಕ್ಕಿಸದೆ ಪ್ಲೇಗ್ ರೋಗಿಗಳಿಗೆ ಶುಶ್ರೂಷೆ ಮಾಡಬೇಕಾಗಿದೆ. ಆವಶ್ಯಕತೆ ಉಂಟಾದರೆ ಮಠಕ್ಕಾಗಿ ಬೇಲೂರಿನಲ್ಲಿ ತೆಗೆದುಕೊಂಡಿರುವ ನಿವೇಶನವನ್ನು ಮಾರುವುದಕ್ಕೆ ಅಥವಾ ಪ್ಲೇಗ್‌ನಿಂದ ನರಳುತ್ತಿರುವವರಿಗೆ ಔಷಧಿ, ಉಪಚಾರ ಮಾಡುವುದಕ್ಕೆ ನಮ್ಮ ಜೀವನವನ್ನೇ ಕೊಟ್ಟುಬಿಡೋಣ" ಎಂದು ಹೇಳಿದರು. ಭಯದ ವಾತಾವರಣವನ್ನು ಹತೋಟಿಗೆ ತರುವುದಕ್ಕಾಗಿ ಸ್ವಾಮೀಜಿಯವರು ಬಂಗಾಳಿ ಮತ್ತು ಹಿಂದಿಯಲ್ಲಿ ಒಂದು ಕರಪತ್ರವನ್ನು ಮುದ್ರಿಸಿ ಕಲ್ಕತ್ತೆಯ ಜನರಿಗೆ ಹಂಚಿದರು. ಅದರಲ್ಲಿ ಹೀಗೆ ಬರೆದಿತ್ತು: "ಹೆದರದಿರಿ. ಗಾಬರಿಯಾಗಬೇಕಾದ ಆವಶ್ಯಕತೆಯಿಲ್ಲ. ಗಾಳಿಸಮಾಚಾರಕ್ಕೆ ಕಿವಿಗೊಡಬೇಡಿ. ಬ್ರಿಟಿಷ್ ಸರ್ಕಾರ ಬಲವಂತವಾಗಿ ಚುಚ್ಚುಮದ್ದನ್ನು ಕೊಡುತ್ತಿಲ್ಲ. ಶ್ರೀಮಂತರು ಓಡಿಹೋಗಲಿ. ನಾವು ಬಡವರು. ನಮಗೆ ಬಡವರ ಬವಣೆ ಅರ್ಥವಾಗುತ್ತದೆ. ನಿಮಗೆ ಸಹಾಯ ಮಾಡುವವರು ಯಾರೂ ಇಲ್ಲದಿದ್ದರೆ, ಕೂಡಲೆ ಶ್ರೀರಾಮಕೃಷ್ಣರ ಸೇವಕರಾದ ಬೇಲೂರು ಮಠದಲ್ಲಿರುವ ನಮಗೆ ತಿಳಿಸಿ. ಭಗವತಿಯ ಕೃಪೆಯಿಂದ ನಿಮಗೆ ಸಾಧ್ಯವಾದ ನೆರವನ್ನು ನೀಡುತ್ತೇವೆ."

ಅದೃಷ್ಟವಶಾತ್ ಪಿಡುಗು ಬೇಗನೆ ಇಳಿಮುಖವಾಯಿತು. ಯಾವ ಪರಿಹಾರಕಾರ್ಯವನ್ನೂ ಮಾಡಬೇಕಾಗಿ ಬರಲಿಲ್ಲ. ಪ್ಲೇಗ್ ಮುಂದಿನ ವರ್ಷ ೧೮೯೯ರಲ್ಲಿ ಮತ್ತೆ ತಲೆದೋರಿತು. ಬಹುಸಂಖ್ಯೆಯಲ್ಲಿ ಜನ ಸಾವನ್ನಪ್ಪಿದರು, ಮತ್ತೆ ಭೀತಿ ಆವರಿಸಿತು. ಅಂದಿನ ವರ್ಷದ ಮಾರ್ಚ್ ೩೧ರಂದು ರಾಮಕೃಷ್ಣ ಮಿಷನ್ ಸ್ವಾಮೀಜಿಯವರ ನೇತೃತ್ವದಲ್ಲಿ ತಡವಿಲ್ಲದೆ ಪ್ಲೇಗ್ ನಿವಾರಣೆಯ ಕೆಲಸಕ್ಕೆ ಕೈಹಾಕಿತು. ಸ್ವಾಮೀಜಿಯವರೇ ಒಂದು ಬಡ ಮನೆಯಲ್ಲಿ ವಾಸವಿದ್ದು ಜನರಿಗೆ ಧೈರ್ಯ ನೀಡಿ ಸೇವಾಕಾರ್ಯ ಮಾಡುವವರನ್ನು ಹುರಿದುಂಬಿಸಿದರು. ಈ ಕಾರ್ಯದ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಸೋದರಿ ನಿವೇದಿತಾಗೆ ವಹಿಸಲಾಯಿತು. ಸ್ವಾಮಿ ಸದಾನಂದರು ಈ ಕೆಲಸಕ್ಕೆ ಹೆಗಲು ಕೊಟ್ಟರು. ಸ್ವಾಮಿ ಶಿವಾನಂದರು, ನಿತ್ಯಾನಂದರು ಮತ್ತು ಆತ್ಮಾನಂದರು ಸಹಾಯಕರಾಗಿ ದುಡಿದರು. ಭಗಿನಿ ನಿವೇದಿತಾ ಮನೆಗಳನ್ನು, ಗಲ್ಲಿಗಳನ್ನು ಗುಡಿಸಿ ಇತರರಿಗೆ ಉತ್ಕೃಷ್ಟ ಮಾದರಿಯಾದರು.

ಮಠದ ಸಾಧುಗಳು ಮತ್ತು ಸ್ವಯಂಸೇವಕರು ಪ್ಲೇಗ್ ನಿವಾರಣೆಗೆ ಹಗಲು ರಾತ್ರಿ ಶ್ರಮಿಸಿದರು. ದುರ್ವಾಸನೆಯಿಂದ ಕೂಡಿದ ಬಚ್ಚಲುಗಳನ್ನು, ಮಲಮೂತ್ರದ ಕೋಣೆಗಳನ್ನು ಸ್ವಚ್ಛಗೊಳಿಸಿ ಕ್ರಿಮಿನಾಶಕಗಳನ್ನು ಸಿಂಪಡಿಸಿದರು. "ಕಲ್ಕತ್ತೆಯ ಅತ್ಯಂತ ಕೊಳಕು ರಸ್ತೆಗಳಲ್ಲಿ ಮತ್ತು ಕೊಳಚೆ ನಿವಾಸಗಳು ಇರುವೆಡೆಯಲ್ಲೆಲ್ಲ ರಾಮಕೃಷ್ಣ ಮಿಷನ್ನಿನ ಸ್ವಯಂಸೇವಕರನ್ನು ನೋಡಬಹುದಾಗಿತ್ತು. ಪ್ಲೇಗ್ ಇರುವೆಡೆಯಲ್ಲಿ ಶುಚಿಗೊಳಿಸುತ್ತ, ಜನರನ್ನು ಹುರಿದುಂಬಿಸುತ್ತ, ಅವರ ಕಷ್ಟಗಳಿಗೆ ಸಮಾಧಾನ ನೀಡುತ್ತ, ನೈರ್ಮಲ್ಯದ ತಿಳಿವಳಿಕೆ ಕೊಡುತ್ತ ಅವರೆಲ್ಲ ಕೆಲಸ ಮಾಡುತ್ತಿದ್ದರು. ಇಷ್ಟನ್ನೆಲ್ಲ ಹೆಚ್ಚು ಹಣ ಖರ್ಚುಮಾಡದೆ ಮಾಡಿದರು" ಎಂದು ಏಪ್ರಿಲ್ ೧೯೦೦ರ ಒಂದು ದಿನ 'ಇಂಡಿಯನ್ ಮಿರರ್' ಪತ್ರಿಕೆ ವರದಿ ಮಾಡಿತು. ಪಿಡುಗು ಇಳಿಮುಖವಾದರೂ ೧೯೦೦ರಲ್ಲಿ ಅದು ಮತ್ತೆ ಹರಡಿತು. ರೋಗ ಸಂಪೂರ್ಣವಾಗಿ ನಿರ್ಮೂಲನವಾಗುವವರೆಗೂ ರಾಮಕೃಷ್ಣ ಮಿಷನ್ ನಿವಾರಣಾಕಾರ್ಯವನ್ನು ಮುಂದುವರೆಸಿತು. ಇದಕ್ಕಾಗಿ ದುಡಿದವರ ನಿಷ್ಠೆ ಮತ್ತು ತ್ಯಾಗ ಮುಂದಿನವರಿಗೆ ಸ್ಫೂರ್ತಿಯ ಆಗರವಾಯಿತು.



ನಂತರದ ೧೦೦ ವರ್ಷಗಳಲ್ಲಿ ರಾಮಕೃಷ್ಣ ಮಿಷನ್ ೧೩೪ ಪರಿಹಾರ ಕಾರ್ಯಗಳನ್ನು ದೇಶದ ಎಲ್ಲ ರಾಜ್ಯಗಳಲ್ಲಿಯೂ ನಡೆಸಿದೆ. ಪರಿಹಾರಗಳ ವಿಧಾನ ಮತ್ತು ಖರ್ಚಿನ ವಿವರಗಳು ಅದು ಕಾಲಕಾಲಕ್ಕೆ ಹೊರಡಿಸಿರುವ ವರದಿಗಳಲ್ಲಿ ನೋಡಲು ಸಿಗುತ್ತವೆ. ಇವುಗಳಲ್ಲಿ ಪ್ರಮುಖವಾದ ಕೆಲವು ಪರಿಹಾರ ಕಾರ್ಯಗಳ ವಿವರಗಳನ್ನು ಸಂಕ್ಷೇಪವಾಗಿ ಇಲ್ಲಿ ಕೊಡಲಾಗಿದೆ. ಇವುಗಳಿಂದ, ಸಮಸ್ಯೆಯ ತೀವ್ರತೆ, ಪರಿಹಾರದ ಪ್ರಮಾಣ ಮತ್ತು ಸವಾಲುಗಳನ್ನು ನಾವು ಊಹಿಸಿಕೊಳ್ಳಲು ಸಹಾಯಕವಾಗುತ್ತದೆ.

**ಬಿಹಾರದ ಭೂಕಂಪ:** ಪ್ರಪಂಚದ ಎರಡು ಮಹಾಯುದ್ಧಗಳ (೧೯೧೪–೧೮) ಮಧ್ಯಕಾಲದಲ್ಲಿ ಭಾರತವು ವಿನಾಶಕಾರಿಯಾದ ಭೂಕಂಪದಿಂದ ಕಷ್ಟಕ್ಕೊಳಗಾಯಿತು. ಭೂಕಂಪದಿಂದ ಇಡೀ ಬಿಹಾರ್ ರಾಜ್ಯ ನಡುಗಿತು. ಅಸಂಖ್ಯ ಜನರು ಮತ್ತು ದನಕರುಗಳು ಮರಣಹೊಂದಿದುವು. ಸಹಸ್ರಗಟ್ಟಲೆ ಮನೆಗಳು ನೆಲಸಮವಾದುವು. ಅಪಾರ ಹಾನಿಯುಂಟಾಯಿತು. ಅಲ್ಲಿಗೆ ರಾಮಕೃಷ್ಣ ಮಿಷನ್ ಪರಿಹಾರ ಸಾಮಗ್ರಿಗಳೊಡನೆ ಧಾವಿಸಿತು. ನಂತರ ಜನರಿಗೆ ಬಿದ್ದುಹೋದ ಮನೆಗಳನ್ನು ಕಟ್ಟಿಕೊಳ್ಳಲು ಸಹಾಯ ಮಾಡಲಾಯಿತು. ಆಗ ಮಿಷನ್ನಿನ ಕಾರ್ಯದರ್ಶಿಗಳಾಗಿದ್ದ ಸ್ವಾಮಿ ವಿರಜಾನಂದರು ೧೯೩೪, ಜೂನ್ ೧೭ರ ವರದಿಯಲ್ಲಿ ಹೀಗೆ ಬರೆದಿದ್ದಾರೆ:

"ಅವಶ್ಯಕ ಪರಿಹಾರಕಾರ್ಯಗಳನ್ನು ಮಾಡಿದ ನಂತರ ಮುಜ಼ಾಫ಼ರ್‌ಪುರ್ ಜಿಲ್ಲೆಯ ಸೀತಾಮಾರಿ, ಗಾಂಗೇಯ ಮತ್ತು ಪಪ್ರಿ ಹಾಗೂ ದರ್ಭಾಂಗ ಜಿಲ್ಲೆಯ ಜಯನಗರದಲ್ಲಿರುವ ಪರಿಹಾರ ಕೇಂದ್ರಗಳನ್ನು ಮುಚ್ಚಲಾಗಿದೆ. ಇನ್ನು ಏಳು ಜಿಲ್ಲೆಗಳಲ್ಲಿ ಪರಿಹಾರಕಾರ್ಯ ಮುಂದುವರೆದಿದೆ. ಮಧ್ಯಮವರ್ಗದ ಕುಟುಂಬಗಳಿಗೆ ಸಾಕಷ್ಟು ಭದ್ರವಾದ ಮನೆಗಳನ್ನು ಕಟ್ಟಿಕೊಡುವುದು ಮತ್ತು ಅದಕ್ಕೆ ಬೇಕಾದ ಸಾಮಗ್ರಿಯನ್ನು ಒದಗಿಸುವುದು, ಭಗ್ನವಾದ ಮನೆಗಳ ದುರಸ್ತಿ, ಹಾಳಾದ ಬಾವಿಗಳನ್ನು ಸರಿಪಡಿಸುವುದು, ಹೊಸ ಬಾವಿಗಳನ್ನು ತೋಡುವುದು – ಇವಕ್ಕೆ ಪ್ರಾಧಾನ್ಯತೆ ಕೊಡಲಾಗುತ್ತಿದೆ. ಚಂಪಾರಣ್ ಜಿಲ್ಲೆಯಲ್ಲಿ ಮಾತ್ರವೇ ಅಕ್ಕಿಯ ವಿತರಣೆ ನಡೆಯುತ್ತಿದೆ. ಮುಜ಼ಾಫ಼ರ್‌ಪುರ್‌ನಲ್ಲಿ ೮೭ ಸಂಪೂರ್ಣವಾದ ಸ್ವತಂತ್ರ ಮನೆಗಳುಳ್ಳ 'ರಾಮಕೃಷ್ಣನಗರ' ಎಂಬ ಕಾಲೊನಿ ರೂಪುಗೊಂಡಿದೆ. ಹಳೆಯ ಮನೆಗಳಿದ್ದ ಸ್ಥಳದಲ್ಲಿಯೇ ೭೬ ಗುಡಿಸಲುಗಳು ನಿರ್ಮಾಣವಾಗಿವೆ. ಇನ್ನೂ ೧೫ ಗುಡಿಸಲುಗಳನ್ನು ಕಟ್ಟಲಾಗುತ್ತಿದೆ. ೪೦ ಗುಡಿಸಲುಗಳನ್ನು ಕಟ್ಟಬೇಕಾಗಿದೆ. ೩೬ ಗುಡಿಸಲುಗಳನ್ನು ಕಟ್ಟಲು ಬೇಕಾದ ಸಾಮಗ್ರಿ ಮತ್ತು ಹಣವನ್ನು ಒದಗಿಸಲಾಗಿದೆ... ಪರಿಹಾರಕಾರ್ಯವನ್ನು ಇನ್ನೂ ಸ್ವಲ್ಪ ಕಾಲ ಮುಂದುವರಿಸಬೇಕಾಗಿದೆ. ಮಳೆ ಪ್ರಾರಂಭವಾಗಿರುವುದರಿಂದ ನಿರ್ಮಾಣಕಾರ್ಯವನ್ನು ಬೇಗನೆ ಮುಗಿಸಲು ಪ್ರಯತ್ನಮಾಡಲಾಗುತ್ತಿದೆ. ದಾನಿಗಳ ಉದಾರ ಕೊಡುಗೆಯಿಂದಾಗಿ ಇದುವರೆಗೆ ಇಷ್ಟು ಕಾರ್ಯವನ್ನು ಮಾಡಲು ಸಾಧ್ಯವಾಗಿದೆ."

ಒಂದು ತಿಂಗಳಿನ ನಂತರ ಸ್ವಾಮಿ ವಿರಜಾನಂದರು ಇನ್ನೊಂದು ವರದಿಯನ್ನು ಕೊಟ್ಟರು: "ಬಿಹಾರದ ಪರಿಹಾರ ಕಾರ್ಯ ಇನ್ನೇನು ಮುಗಿಯಲಿದೆ. ಮುಜ಼ಾಫ಼ರ್‌ಪುರ್‌ನ ಕೆಲವು ಕೇಂದ್ರಗಳ ಹೊರತಾಗಿ ಮಿಕ್ಕೆಲ್ಲ ಕೇಂದ್ರಗಳನ್ನೂ ಮುಚ್ಚಲಾಗಿದೆ. ಇನ್ನೊಂದು ತಿಂಗಳಲ್ಲಿ ಎಲ್ಲ ಕಾರ್ಯಗಳೂ

ಮುಗಿಯುವುವು. ಭೂಕಂಪ ಪರಿಹಾರಕಾರ್ಯಕ್ಕೆ ಇದುವರೆಗೆ ೧,೧೨,೭೨೧ ರೂಪಾಯಿಗಳು ದೇಣಿಗೆಯಾಗಿ ಬಂದಿವೆ. ೧,೧೦,೦೬೭ ರೂಪಾಯಿಗಳು ಖರ್ಚಾಗಿವೆ. ಉಳಿದ ೨,೬೫೪ ರೂಪಾಯಿಗಳಲ್ಲಿ ಉಳಿದ ಕೆಲಸಗಳನ್ನು ಮುಗಿಸಲಾಗುವುದು."

ಮೇಲಿನ ವರದಿಯಿಂದ ಪರಿಹಾರಕಾರ್ಯದ ಪ್ರಮಾಣ ಮತ್ತು ವಿಸ್ತಾರವಲ್ಲದೆ, ಸಾರ್ವಜನಿಕರಿಗೆ ನಿಖರವಾದ ಮಾಹಿತಿಯನ್ನು ಒದಗಿಸಲು ತೆಗೆದುಕೊಂಡ ಶ್ರಮವನ್ನೂ ಗಮನಿಸಲು ನಮಗೆ ಸಾಧ್ಯವಾಗುವುದು.

**ಪೂರ್ವಬಂಗಾಳದ ಹಿಂಸಾಚಾರ:** ಪೂರ್ವಬಂಗಾಳದ ನೌಖಾಲಿ ಮತ್ತು ತಿಪ್ಪೆರ ಜಿಲ್ಲೆಗಳಲ್ಲಿ ಕೋಮು ಹಿಂಸಾಚಾರ ೧೯೪೬ರಲ್ಲಿ ಪ್ರಾರಂಭವಾಯಿತು. ಸುದ್ದಿ ತಲಪುತ್ತಿದ್ದಂತೆ ರಾಮಕೃಷ್ಣ ಮಿಷನ್ನಿನ ಸಾಧುಗಳ ತಂಡವೊಂದು ಅಲ್ಲಿಗೆ ಹೊರಟಿತು. ಚಾಂದ್‌ಪುರ್‌ನಲ್ಲಿ ಸೇವಾಕೇಂದ್ರವನ್ನು ಸ್ಥಾಪಿಸಿ ಅಲ್ಲಿಂದ ಪ್ರತಿನಿತ್ಯ ಸುಮಾರು ೨,೦೦೦ ಜನರಿಗೆ ಆಹಾರ ಸಾಮಗ್ರಿಗಳನ್ನು ಒದಗಿಸಲಾಯಿತು. ಸರಕಾರ ನಡೆಸುತ್ತಿದ್ದ ಎರಡು ಕೇಂದ್ರಗಳ ಜವಾಬ್ದಾರಿಯನ್ನೂ ರಾಮಕೃಷ್ಣ ಮಿಷನ್ ವಹಿಸಿಕೊಂಡು ಪ್ರತಿನಿತ್ಯ ೩,೦೦೦ ಜನರಿಗೆ ಆಹಾರ ಒದಗಿಸಿತು. ಮಿಷನ್ನಿನ ಸೇವೆ ೧೨೦ ಗ್ರಾಮಗಳಲ್ಲಿ ಎರಡು ವರ್ಷಗಳಿಗೂ ಮೀರಿ ನಡೆಯಿತು. ಮಿಷನ್ನಿನ ಕಡೆಯಿಂದ ಆರ್ಥಿಕ ಸಹಾಯ, ಶಿಕ್ಷಣ, ಔಷಧಿ, ವೈದ್ಯಕೀಯ ಚಿಕಿತ್ಸೆ, ಪುನರ್ವಸತಿ, ಗೃಹನಿರ್ಮಾಣ, ನೊಂದವರಿಗೆ ಆಧ್ಯಾತ್ಮಿಕ ಸಾಂತ್ವನ ಮುಂತಾದ ನೆರವನ್ನು ನೀಡಲಾಯಿತು. ಈ ಸೇವಾಕಾರ್ಯಕ್ಕೆ ತಗಲಿದ ವೆಚ್ಚ ೩, ೨೫, ೫೦೦ ರೂಪಾಯಿಗಳು.

**ಕುರುಕ್ಷೇತ್ರದ ವಲಸಿಗರು:** ೧೯೪೭ರಲ್ಲಿ ಭಾರತದಿಂದ ಪಾಕಿಸ್ತಾನ ಬೇರೆಯಾದಾಗ ಪಂಜಾಬ್ ಪ್ರಾಂತ್ಯವೂ ಇಬ್ಭಾಗವಾಯಿತು. ಪಾಕಿಸ್ತಾನದ ಕಡೆಯಿಂದ ಜನರು ತಂಡೋಪತಂಡವಾಗಿ ಭಾರತಕ್ಕೆ ಬಂದರು. ಹಿಂದೆ ರಾಮಕೃಷ್ಣ ಮಿಷನ್ನಿನ ಸೇವಾಕಾರ್ಯವನ್ನು ಮೆಚ್ಚಿಕೊಂಡಿದ್ದ ಭಾರತ ಸರ್ಕಾರ, ಈ ಬಾರಿಯೂ ಅದರ ಸಹಾಯವನ್ನು ಕೋರಿತು. ಈ ಕಾರ್ಯ ಅಕ್ಟೋಬರ್ ೧೯೪೭ರಲ್ಲಿ ಪ್ರಾರಂಭವಾಗಿ ಎಂಟು ತಿಂಗಳ ಕಾಲ ನಡೆಯಿತು. ಭಾರತ ಸರ್ಕಾರ ೨೦,೦೦೦ ಕಂಬಳಿಗಳನ್ನು ಆವಶ್ಯಕತೆ ಇರುವ ವಲಸಿಗರಿಗೆ ವಿತರಿಸಬೇಕಾಗಿತ್ತು. ಈ ಕೆಲಸವನ್ನು ಮಾಡುವುದಕ್ಕಾಗಿ ಕಾರ್ಯಕರ್ತರು ಮಧ್ಯರಾತ್ರಿಯಲ್ಲಿ ಗುಡಾರದಿಂದ ಗುಡಾರಕ್ಕೆ ಹೋಗಿ, ಬೆಚ್ಚನೆಯ ಹೊದಿಕೆ ಇಲ್ಲದವರನ್ನು ಗುರುತಿಸಿ, ಅವರಿಗೆಲ್ಲ ಗುರುತಿನ ಚೀಟಿ ಕೊಟ್ಟರು. ಈ ಚೀಟಿ ಇರುವವರಿಗೆ ಮರುದಿನ ಸರ್ಕಾರಿ ಮಳಿಗೆಯಲ್ಲಿ ಬೆಚ್ಚನೆಯ ಕಂಬಳಿ ಕೊಡಲಾಯಿತು. ಇದರ ಜತೆಗೆ ಮಿಷನ್ನಿನವರು ಒಂದು ಪೌಂಡು ಹಣ್ಣಿನ ರಸ ಇರುವ ೪,೦೮,೦೯೬ ಟಿನ್‌ಗಳು, ೫೧,೬೦೦ ಬಹುಪೋಷಕಾಂಶ ಮಾತ್ರೆಗಳು, ೧೩,೦೯೮ ಉಡುಪುಗಳು, ೨೩,೦೩ ಕಂಬಳಿಗಳು, ಮತ್ತು ೭,೮೨೦ ಪಾತ್ರೆಗಳನ್ನು ವಿತರಿಸಿದರು. ಇವುಗಳಲ್ಲಿ ಬಹುಭಾಗ ಸರ್ಕಾರದವರು ಕೊಟ್ಟಿದ್ದಾಗಿತ್ತು. ಇದರ ಜತೆಗೆ ಮಿಷನ್ನಿನವರು ಒಂದು ಹಾಲಿನ ಕ್ಯಾಂಟೀನ್ ಮತ್ತು ನಾಲ್ಕು ಹೊಸ ಚಿಕಿತ್ಸಾಲಯಗಳನ್ನು ತೆರೆದರು. ನಿತ್ಯವೂ ಸರಾಸರಿ ೨೭೫ ರೋಗಿಗಳು, ಸಾಮಾನ್ಯವಾಗಿ ಅತಿಸಾರದ ಕಾಯಿಲೆಗೆ ಇಲ್ಲಿ ಔಷಧಿ ಪಡೆಯುತ್ತಿದ್ದರು.

**ಪೂರ್ವ ಪಾಕಿಸ್ತಾನದ ನಿರಾಶ್ರಿತರು:** ೧೯೪೭ರಲ್ಲಿ ಪೂರ್ವ ಪಾಕಿಸ್ತಾನದಿಂದ ನಿರಾಶ್ರಿತರು ಪಶ್ಚಿಮ ಬಂಗಾಳಕ್ಕೆ ಬರಲಾರಂಭಿಸಿದರು. ರಾಮಕೃಷ್ಣ ಮಿಷನ್ ಸಣ್ಣ ಪ್ರಮಾಣದಲ್ಲಿ ಇವರ ಕ್ಷೇಮ ನೋಡಿಕೊಳ್ಳುವ ಕೆಲಸವನ್ನು ಪ್ರಾರಂಭಿಸಿತು. ತಂದೆತಾಯಿಗಳಿಂದ ಬೇರೆಯಾದ ಬಾಲಕಬಾಲಕಿಯರನ್ನು ಮಿಷನ್ನಿನ ಕೆಲವು ಸಂಸ್ಥೆಗಳಲ್ಲಿ ಇರಿಸಲಾಯಿತು. ಅಗರ್ತಲಾದಲ್ಲಿ ಕ್ರಮೇಣ ಒಂದು ನಿರಾಶ್ರಿತರ ಕಾಲೊನಿ ನಿರ್ಮಿಸಲಾಯಿತು. ೧೯೪೯ರಲ್ಲಿ ಅಸ್ಸಾಂನ ಲುಂಡಿಂಗ್‌ನಲ್ಲಿ ಒಂದು ಪರಿಹಾರ ಕೇಂದ್ರವನ್ನೂ ತೆರೆಯಲಾಯಿತು. ೧೯೪೮ರ ಮೇ ತಿಂಗಳಿನಲ್ಲಿ ಪಶ್ಚಿಮ ಬಂಗಾಳದ ಸರ್ಕಾರದ ಕೋರಿಕೆಯ ಮೇರೆಗೆ ಪೂರ್ವಬಂಗಾಳದ ವಲಸಿಗರಿಗೆ, ಕಲ್ಕತ್ತೆಯ ಕೈಗಾರಿಕಾ ಪ್ರದೇಶದಲ್ಲಿ ತುರ್ತುಪರಿಹಾರ ನೀಡುವ ಕಾರ್ಯವನ್ನು ಕೈಗೊಳ್ಳಲಾಯಿತು. ಸರ್ಕಾರ ಕೊಟ್ಟ ಆಹಾರಧಾನ್ಯ, ಹಣ ಮತ್ತು ಬಟ್ಟೆಯನ್ನು ಮಿಷನ್ನಿನ ಶಾರದಾಪೀಠ, ಬೇಲೂರು, ಮತ್ತು ರಾಹರಾದ ಬಾಲಕರ ವಸತಿಗೃಹ – ಈ ಎರಡು ಕೇಂದ್ರಗಳ ಮೂಲಕ ವಿತರಿಸಲಾಯಿತು. ಈ ಕಾರ್ಯವನ್ನು ಮಾರ್ಚ್ ೧೯೪೯ರವರೆಗೂ ಮುಂದುವರೆಸಲಾಯಿತು.

ಕೋಮು ಹಿಂಸಾಚಾರ ಮತ್ತೆ ಮುಂದುವರೆದ ಕಾರಣ ಪಶ್ಚಿಮ ಬಂಗಾಳದ ಐದಾರು ಜಿಲ್ಲೆಗಳಲ್ಲಿ ಪರಿಹಾರ ಕೇಂದ್ರಗಳನ್ನು ತೆರೆದು ಸಾವಿರಾರು ವಲಸಿಗರಿಗೆ ವಸತಿ, ಆಹಾರ ಮತ್ತು ಬಟ್ಟೆಯನ್ನು ಕೊಡಲಾಯಿತು. ಢಾಕಾ ಮತ್ತು ನಾರಾಯಣಗಂಜ್‌ನ ರಾಮಕೃಷ್ಣ ಮಿಷನ್ ಕೇಂದ್ರಗಳಲ್ಲಿ ೩೦೦ ವಲಸಿಗರಿಗೆ ಅನೇಕ ದಿನಗಳವರೆಗೆ ಆಹಾರ ಮತ್ತು ವಸತಿಯನ್ನು ಒದಗಿಸಲಾಯಿತು. ೧೯೫೦ರ ಜೂನ್ ತಿಂಗಳಿನಲ್ಲಿ ಭಾರಿ ಸಂಖ್ಯೆಯಲ್ಲಿ ವಲಸಿಗರು ಕಲ್ಕತ್ತೆಯ ಸಿಯಾಲ್ದಾ ರೈಲು ನಿಲ್ದಾಣದಲ್ಲಿ ಬೀಡುಬಿಟ್ಟರು. ಅಂಥ ಸುಮಾರು ೧೨,೦೦೦ ಜನರಿಗೆ ಮೂರು ತಿಂಗಳ ಕಾಲ ಪ್ರತಿನಿತ್ಯ ಅಡುಗೆ ಮಾಡಿ ಊಟ ಬಡಿಸಲಾಯಿತು. ನಂತರ ವಲಸಿಗರಿಗೆ ವ್ಯವಸ್ಥಿತ ರೀತಿಯಲ್ಲಿ ವಸತಿ ಕಲ್ಪಿಸುವ ಪ್ರಯತ್ನವನ್ನು ರಾಮಕೃಷ್ಣ ಮಿಷನ್ ಕೈಗೆತ್ತಿಕೊಂಡಿತು. ಸುಮಾರು ೪೦೦ ಸಂಸಾರಗಳಿಗೆ ಅಗರ್ತಲ, ಸೋನೆಬಿಲ್, ಮಾಲ್ದ, ಸಿಮುರಲಿ ಮತ್ತು ಬಂಡಿಪುರ್‌ನಲ್ಲಿ ವಸತಿ ಕಲ್ಪಿಸಲಾಯಿತು. ೧೯೫೩ರ ವೇಳೆಗೆ ಇದರ ಸಂಖ್ಯೆ ೧,೫೮೩ಕ್ಕೆ ಏರಿತು.

**ಬರ್ಮಾದಿಂದ ಹೊರಬಿದ್ದವರಿಗೆ ಪರಿಹಾರ:** ರಾಮಕೃಷ್ಣ ಮಿಷನ್ನಿನ ಮತ್ತೊಂದು ಗಮನಾರ್ಹ ಪರಿಹಾರಕಾರ್ಯವೆಂದರೆ, ಎರಡನೆ ಮಹಾಯುದ್ಧದ ನಂತರ ಬರ್ಮಾದಿಂದ ಹೊರಬಂದವರಿಗೆ ಡಿಮಾಪುರದಲ್ಲಿ ನೀಡಿದ ನೆರವು. ದೇಶದ ವಿಭಜನೆಯಾದ

ನಂತರ ಬರ್ಮಾದಲ್ಲಿ ನೆಲೆಸಿದ್ದ ಭಾರತೀಯರು ಅಲ್ಲಿನ ದುಃಸ್ಥಿತಿಯಲ್ಲಿ ಇರಲಾರದೆ ಭಾರಿ ಸಂಖ್ಯೆಯಲ್ಲಿ ಕಾಲ್ನಡಿಗೆಯಲ್ಲಿ ಭಾರತಕ್ಕೆ ಡಿಮಾಪುರದ ಮೂಲಕ ಬಂದರು. ಅವರ ಸ್ಥಿತಿ ಶೋಚನೀಯವಾಗಿತ್ತು. ಆಗ ಷಿಲಾಂಗ್‌ನ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದ ಸ್ವಾಮಿ ಭೂತೇಶಾನಂದಜಿ ಈ ಪರಿಹಾರ ಕಾರ್ಯದ ಹೊಣೆ ಹೊತ್ತರು. ಈ ಬಗ್ಗೆ ಅವರು ನಂತರದಲ್ಲಿ ನೀಡಿದ ವಿವರಣೆ ಹೀಗಿತ್ತು:

"ಸರ್ಕಾರದ ಕೋರಿಕೆಯ ಮೇರೆಗೆ ಡಿಮಾಪುರದಲ್ಲಿ, ಬರ್ಮಾದಿಂದ ದೂಡಲ್ಪಟ್ಟವರಿಗಾಗಿ ಒಂದು ಕ್ಯಾಂಪನ್ನು ೧೯೪೪ರಲ್ಲಿ ತೆರೆಯಲಾಯಿತು. ತಕ್ಷಣ ನಾವು ಮಾಡಬೇಕಾಗಿದ್ದುದೆಂದರೆ, ವಲಸೆ ಬರುತ್ತಿದ್ದವರನ್ನು ಸ್ವಾಗತಿಸಿ, ಆಹಾರ ಕೊಟ್ಟು, ಸೋಂಕು ಇರುವವರಿಗೆ ಔಷಧಿ ಕೊಟ್ಟು, ಕಾಯಿಲೆ ಇರುವ ಮಕ್ಕಳಿಗೆ ಹಾಲನ್ನು ಕೊಟ್ಟು, ನಂತರ ಅವರನ್ನು ಬೇರೆ ಸ್ಥಳಕ್ಕೆ ಕರೆದೊಯ್ಯಲು ವ್ಯವಸ್ಥೆ ಮಾಡುವುದಾಗಿತ್ತು. ಪರಿಹಾರಕಾರ್ಯಕ್ಕೆ ಬೇಕಾದುದನ್ನು ಬಹುಮಟ್ಟಿಗೆ ಸರ್ಕಾರ ಕೊಟ್ಟಿತ್ತು; ಅದರ ನಿರ್ವಹಣೆಯನ್ನು ಮಿಷನ್ ಮಾಡಿತು. ಆದರೆ ಇದನ್ನು ಮಾಡುವುದು ಬಹಳ ಕಷ್ಟವಾದುದಾಗಿತ್ತು, ಏಕೆಂದರೆ, ಸ್ಥಳವೆಲ್ಲ ಮಣ್ಣು, ಕೆಸರಿನಿಂದ ಕೂಡಿತ್ತು. ಇದರ ಜೊತೆಗೆ ಮರಣ ಸನ್ನಿಹಿತವಾಗಿರುವ ರೋಗಿಗಳ ಆರ್ತನಾದ ಬೇರೆ. ಅಲ್ಲದೆ, ಆಹಾರ, ವಸತಿ, ಕುಡಿಯುವ ನೀರು, ಬಟ್ಟೆ ಮತ್ತು ಇತರ ನಿತ್ಯೋಪಯೋಗಿ ವಸ್ತುಗಳಿಲ್ಲದೆ ನಿರಾಶರಾಗಿ ಹತಾಶರಾಗಿದ್ದ ಜನರ ಗದ್ದಲ ಕೂಡ ಅತಿ ಹೆಚ್ಚಾಗಿತ್ತು. ಅಲ್ಲದೆ, ಶತ್ರುಸೈನ್ಯದವರು ಆಗಾಗ್ಗೆ ಬಾಂಬ್ ಹಾಕುತ್ತಿದ್ದುದರಿಂದ, ದಿಗಿಲು, ಭಯ, ಆತಂಕ ಕ್ಯಾಂಪ್‌ನಲ್ಲಿ ಉಂಟಾಗುತ್ತಿದ್ದವು. ಬಹುಶಃ ರಾಮಕೃಷ್ಣ ಮಿಷನ್ನಿನ ಪರಿಹಾರಕಾರ್ಯದ ಚರಿತ್ರೆಯಲ್ಲಿಯೇ ಯುದ್ಧಕಾಲದ ಈ ಪರಿಹಾರಕಾರ್ಯವು ಅತ್ಯಂತ ಕಷ್ಟಕರವಾಗಿತ್ತೆಂದು ತೋರುತ್ತದೆ."

**ಬಾಂಗ್ಲಾ ದೇಶದ ವಲಸಿಗರಿಗೆ ಪರಿಹಾರ, ೧೯೭೧:** ಪೂರ್ವ ಪಾಕಿಸ್ತಾನ ಬಾಂಗ್ಲಾದೇಶವಾದ ಸಂದರ್ಭದಲ್ಲಿ, ಪಾಕಿಸ್ತಾನದ ಸೈನ್ಯ ಆ ದೇಶದ ಆಡಳಿತವನ್ನು ಕೈಗೆ ತೆಗೆದುಕೊಂಡಿತು. ಆಗ ಜನರು ಕಷ್ಟಪಟ್ಟುದನ್ನು ಹಿಂದೆ ಎಂದೂ ಎಲ್ಲಿಯೂ ಕಾಣಲಾರೆವು. ಒಂದು ಕೋಟಿ ಜನರು ಪ್ರವಾಹದಂತೆ ಭಾರತದ ಗಡಿಯೊಳಗೆ ನುಗ್ಗಿದರು. ಹಿಂಸಾಚಾರ, ಮಾನಹಾನಿ, ಹತ್ಯೆ, ನಿರಾಹಾರ, ದಣಿವು, ಗುಂಡೇಟಿನ ಗಾಯ – ಇವುಗಳಿಂದ ಭಯಭೀತರಾಗಿ ನೊಂದ ಜನ, ವೃದ್ಧರು ಮತ್ತು ಮಕ್ಕಳು ಮುಂದುಗಾಣದೆ ಖಾಲಿ ಸ್ಥಳಗಳು ಇದ್ದ ಕಡೆಯಲ್ಲೆಲ್ಲ ಬೀಡುಬಿಟ್ಟರು. ಯಾವ ಸರ್ಕಾರವೂ ಈ ಪ್ರಮಾಣದ ಹೊರೆ ಹೊರಲಾಗದು. ಆದಕಾರಣ ಅನೇಕ ಸಂಸ್ಥೆಗಳು ಪರಿಹಾರ ಸಾಮಗ್ರಿಯೊಡನೆ ಸ್ಥಳಕ್ಕೆ ಬಂದುವು. ರಾಮಕೃಷ್ಣ ಮಿಷನ್ ಕೂಡ ಬಿಹಾರಿನ ಕಟಿಹಾರ್ ಆಶ್ರಮದ ಮೂಲಕ ಆಹಾರ ಮತ್ತು ಅವಶ್ಯಕ ಸಾಮಗ್ರಿಗಳನ್ನು ನೀಡಲು ೧೯೭೧ರ ಏಪ್ರಿಲ್‌ನಲ್ಲಿ ಮೊದಲ ಕ್ಯಾಂಪ್ ತೆರೆಯಿತು. ಸರ್ಕಾರ ತನ್ನ ಸ್ಥಳೀಯ ಅಧಿಕಾರಿಗಳ ಮೂಲಕ ಪರಿಹಾರವನ್ನು ಕೊಡಲು ಆಗಲೇ ಪ್ರಾರಂಭಿಸಿತ್ತು.

ಆದರೆ ನೊಂದ ಜನರಿಗೆ ಮಾನವೀಯ ಅನುಕಂಪ ಬೇಕಾಗಿತ್ತು. ರಾಮಕೃಷ್ಣ ಮಿಷನ್ ಪಂಥಮುಕ್ತ ರಾಜಕೀಯರಹಿತ ಸಂಸ್ಥೆಯಾದುದರಿಂದ ಅದರ ಕಾರ್ಯಕರ್ತರಿಗೆ ಒಂದು ಸಹಜವಾದ ಅನುಕೂಲವಿತ್ತು. ಇದರಿಂದ ಸರ್ಕಾರದ ಅಧಿಕಾರಿಗಳು ಹೆಚ್ಚಾಗಿ ರಾಮಕೃಷ್ಣ ಮಿಷನ್ನನ್ನು ಅವಲಂಬಿಸಿದರು. ಕೂಡಲೆ ರಾಮಕೃಷ್ಣ ಮಿಷನ್ ಭಾರತದ ಗಡಿಯಲ್ಲಿ ತ್ರಿಪುರ, ಮೇಘಾಲಯದಿಂದ ಪಶ್ಚಿಮ ಬಂಗಾಳದವರೆಗೆ ಅನೇಕ ಪರಿಹಾರ ಕೇಂದ್ರಗಳನ್ನು ತೆರೆದು, ಒಟ್ಟು ೨,೨೦,೦೦೦ ಜನರಿಗೆ ಆಹಾರ, ಬಟ್ಟೆ, ಔಷಧಿ ಮುಂತಾದುವನ್ನು ಒದಗಿಸಿತು. ಸರ್ಕಾರ ಸ್ವಲ್ಪಮಟ್ಟಿಗೆ ಹಣ ಮತ್ತು ಸಾಮಗ್ರಿಗಳನ್ನು ನೀಡಿತು. ಉಳಿದ ಭಾಗವನ್ನು ಮಿಷನ್ ಒದಗಿಸಿತು.

ಬೇಯಿಸಿದ ಆಹಾರವನ್ನು ಕೊಟ್ಟರೆ ಸೋಂಕು ಉಂಟಾಗುತ್ತಿತ್ತು. ಆದುದರಿಂದ ಆಹಾರಧಾನ್ಯ, ಸೊಪ್ಪು, ತರಕಾರಿಯನ್ನು ವಾರಕ್ಕೊಮ್ಮೆ, ಕೆಲವು ವೇಳೆ ವಾರಕ್ಕೆ ಎರಡು ಬಾರಿ ಕೊಡಲಾಗುತ್ತಿತ್ತು. ಅಲ್ಲದೆ ಮಕ್ಕಳಿಗೆ ಮತ್ತು ಪ್ರೌಢರಿಗೆ ಹಾಲನ್ನು ನಿತ್ಯವೂ ಬೆಳಗ್ಗೆ ನೀಡಲಾಯಿತು. ಕೆಲವರಿಗೆ ಸಿಗದೆ ಇರುವುದು ಅಥವಾ ಹೆಚ್ಚು ಬಾರಿ ಸಿಗುವುದನ್ನು ತಪ್ಪಿಸಲು, ಕುಟುಂಬಗಳ ಪಟ್ಟಿಯನ್ನು ವ್ಯವಸ್ಥಿತವಾಗಿ ಮಾಡಲಾಗಿತ್ತು. ಪ್ರತಿಯೊಬ್ಬ ಕುಟುಂಬದ ಯಜಮಾನರಿಗೆ ಗುರುತಿನ ಚೀಟಿಯನ್ನು ಕೊಡಲಾಗಿತ್ತು. ಆಹಾರವಲ್ಲದೆ, ಬಟ್ಟೆ, ಕಂಬಳಿ, ಪಾತ್ರೆ, ಪಾದರಕ್ಷೆ, ಸೋಪು, ಸೊಳ್ಳೆಪರದೆ, ಹಾಸಿಗೆ, ಪಠ್ಯಪುಸ್ತಕಗಳು, ಕಾಗದ, ಲೇಖನಸಾಮಗ್ರಿ, ಉಪಕರಣಗಳು ಮುಂತಾದುವನ್ನೂ ಒದಗಿಸಲಾಯಿತು. ಅನೇಕರಿಗೆ ಮನೆಯನ್ನು ಕಟ್ಟಲು ನೆರವು ನೀಡಲಾಯಿತು. ಅವರಿಗೆಲ್ಲ ಬೊಂಬು, ಮೊಳೆ, ಛಾವಣಿಯ ತಗಡು ಮುಂತಾದ ಕಟ್ಟಡದ ಸಾಮಗ್ರಿಗಳನ್ನು ಕೊಡಲಾಯಿತು. ಇದರಿಂದ ಆಯಾ ಕುಟುಂಬದವರೇ ಮನೆ ಕಟ್ಟಿಕೊಂಡರು.

೧೯೭೩ರ ಡಿಸೆಂಬರ್ ವೇಳೆಗೆ ೧೪೬೬ ಮನೆಗಳು ಮತ್ತು ಯೋಗ್ಯವಾದ ಕುಡಿಯುವ ನೀರಿಗಾಗಿ ೨೪೪ ಕೊಳವೆ ಬಾವಿಗಳು ನಿರ್ಮಾಣವಾಗಿದ್ದುವು. ರಾಮಕೃಷ್ಣ ಮಿಷನ್ ಬಾಂಗ್ಲಾದೇಶದಲ್ಲಿಯೇ ಒಂದು ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಪರಿಹಾರಕ್ಕಾಗಿ ಖರ್ಚುಮಾಡಿತು. ವಲಸಿಗ ಮಕ್ಕಳಿಗೆ ಶಾಲೆಗಳು ಮತ್ತು ಕ್ರೀಡಾವಿಹಾರದ ವ್ಯವಸ್ಥೆಯನ್ನೂ ಮಾಡಲಾಯಿತು. ಒಟ್ಟಿನಲ್ಲಿ ಕಂಗಾಲಾಗಿದ್ದ ಜನ ಎಂದಿನಂತಾದರು. ಹೊಸದಾಗಿ ಸ್ವಾತಂತ್ರ್ಯ ಪಡೆದು ನಿರ್ಮಾಣವಾದ ಬಾಂಗ್ಲಾದೇಶದ ಸರ್ಕಾರದ ಕರೆಯ ಮೇರೆಗೆ ವಲಸಿಗರು ಕ್ರಮೇಣ ತಮ್ಮ ಸ್ವದೇಶಕ್ಕೆ ಹಿಂತಿರುಗಿದರು.

*(ಮುಂದುವರೆಯುವುದು)*